The villagers have been urging for providing National Rural Water Supply Scheme to the village and estimate for 2,45000 has been prepared and this could be consdered only after the village panchayat pays its contribution.

According to the report of the District Health and Family Planning Officer, Mandyathere has been no incident of jaundice at present in Rajgimudlenahalli village the last reported case of jaundice was on 2nd May 1971 and investigations were undertaken by the Health Department and preventive measures were taken in 1970-71. No deaths have occured on account of this disease.

ಶ್ರೀ ಎಚ್.ಡಿ. ದೇವೇಗೌಡ.—ಹ್ಯಾಂಡ್‌ಪಂಪು ಕೆಟ್ಟುಹೋಗಿ ಕುಡಿಯುವ ನೀರಿಗೆ ತೊಂದರೆಯಾಗಿದೆಯೆಂದು ಸುಮಾರು ೨೧ ಜನರು ನನ್ನ ಬಳಿಗೆ ಬಂದಿದ್ದರು. ನಿಮ್ಮಲ್ಲಿಗ ಆವರನ್ನು ಕಳಿಸೋಣ, ಬೇಕಾದರೆ ಫೋನ್ ಮಾಡಿ ಹೇಳೋಣ ಎಂದು ನೋಡಿದೆ ಆವರೆ ತಾವು ಊನಲ್ಲಿರಲಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ಹ್ಯಾಂಡ ಪಂಪು ಕೆಟ್ಟಿರುವುದನ್ನು ಸರಿಮಾಡುವುದಕೆ ಹೇಳಿದ್ದೇನೆ. ಇದುವರೆಗೆ ಪ್ಯೂಂಟಿನ್ಸ್ ಸೆಕ್ಷನ್ ಇರಲಿಲ್ಲ. ಅನೇಕ ಸಾರಿ ಹ್ಯಾಂಡ್ಲ್ ಮಾಡುವುದಕ್ಕೆ ಬರದೆ ಹ್ಯಾಂಡ್ಲ್ ಪಟಿಪನ್ನು ಕೆಡಿಸುವರು. ಆದುದರಿಂದ ಪಂಪು ಕೆಟ್ಟರೆ ಆದರೆ ರಿಪೇರಿ ಖರ್ಚನ್ನು ಆವರಿಗೆ ಡೆ ಬಿಟ್ ಮಾಡುವುದಾಗಿ ಹೇಳಿದ್ದೇನೆ. ಗ್ರಾಂಟ್ ಕೊಡುವುದರಲ್ಲಿ ಆದನ್ನು ವಜಾಹಾಕಲಾಗುವುದು. ಪ್ರತಿ ಆರ್ ಡಿ ವರ್ಕ್‌ನಲ್ಲಿ ವಾವಿ ಆಳವಡಿಸಲು ಪ್ರತಿಯೊಂದು ಡಿವಿಜನ್ನಿಗೂ ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.

ಶ್ರೀ ಎಚ್.ಡಿ. ದೇವೇಗೌಡ.—ಎನ್ ಆರ್ ಡಬ್ಲ್ಯು ಎಸ್ ಸ್ಕೀಮಿನಲ್ಲಿ ಎಸ್ಟಿಮೇಟ್ ಆಗಿದೆ. ಸೇಕಡ ೫ ರಷ್ಟು ಗ್ರಾಮದವರು ಕೊಡಬೇಕಾದ್ದನ್ನು ಪಡೆದು ನೀವು ಸೇಕಡ ೫ರಷ್ಟು ಕೊಟ್ಟು ೨ ಲಕ್ಷದ ೫೫ ಸಾವಿರ ರೂಪಾಯಿಗಳ ಅಂದಾಜಿನಂತೆ ಕೆಲಸಮಾಡಿಸಿ ಪರ್ಮನೆಂಟ್ ರೆಪೇಡಿ ಮಾಡಿ ಕೊಡುವಿರಾ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಸ್ವಲ್ಪ ಕಷ್ಟವಾಗಬಹುದು. ಇಂದು ಮಂಜೂರು ಮಾಡಿರುವ ಸ್ಕೀಂಗಳಿಗೆ ಸುಮಾರು ೧೫-೧೬ ಕೋಟಿ ರೂಪಾಯಿಗಳ ಹಣ ಬೇಕು. ಈಗ ಎಲ್ಲಾಎಸ್ಟಿಮೇಟುಗಳೂ ರಿವೈಜ್ ಆಗುತ್ತಿವೆ ಪ್ರಯತ್ನ ಮಾಡಲಾಗುವುದು.

ಶ್ರೀ ಎಚ್.ಡಿ. ದೇವೇಗೌಡರು.—ಗ್ರಾಮದವರು ಕೊಡಬೇಕಾದ ಹಣ ಕೊಟ್ಟುರೆ ಮಾಡುವಿರಾ?

ಶ್ರೀ ಎಸ್. ಸಿದ್ದವೀರಪ್ಪ.—ಆದನ್ನು ಮಾಡೋಣ.

III re:—absence of transport facilities from Devavrunda village Mudigere.

SRI G. PUTTASWAMY (Mudigere).—I call the attention of the Minister for Transport and Housing to the absence of transport facilities from Devarunda village to Mudigere.

SRI K. H. RANGANATH (Minister for Transport and Housing).—The route Devavrunda to Moodigere via Urubage, Sattigonahalli was operated by a private operator, Sri H. B. Ramegowda, Proprietors M/s. Munzerabad Motor Service. This route from Devavrunda to Moodigere was subsequently extended up to Gowdahalli by the Regional Transport Authority, Chickmangalur on 23rd April 1973. After extension, the whole route became as Devavrunda to Gowdahalli. The total distance of the route is 76 miles (up and down). The bus

(SRI K. H. RANGANATH)

was performing two round trips from Devavrunda to Moodigere hand post and touching Gowdahalli in the second trip only. No other operator is operating on this route.

The service was being operated for the last 5 to 6 years. This permit was subsquently transferred to one Sri G. T. Yellappa Setty' Mudigere on 8th May 1972. On receipt of complaints from the public regarding irregular operations of the abovesaid bus service, the Regional Transport Officer, Chickmangalur has issued show cause notice to the operator.

In reply, the owner of the bus service stated that the irregular operation of the service was due to the non-availability of tyres and also due to bad conditions of the road. The operator of the bus Viz., Sri Yellappa Setty has surrendered the documents to the Office of the Regional Transport Officer, Chickmangalur on 28th March 1974 stating that the vehicle requires some major repairs and that the repairs may may take one or two months. He has not made any alternate arrangements as he has no spare vehicle, to be put on the road In case of breakdown of regular bus.

In view of the above circumstances, the Regional Transport Officer, Chickmanglur has addressed the Karnataka State Road Transport Corporation and private operators to intimate whether they whould put some service on the above said route.

The route from Mudigere to Devavrunda via Gowdahally, Sattiganahally and Urubage is not nationalis d and K.S R.T.C. services are not operating on the route. However, the K.S R.T.C. is operating a service from Chickmangalur to Devavrunda via Mudigere and Hanabal which is a nationalise route to the following timings :—

1030	Chickmangalur	...	153)
0830	Devavrunda	...	1800

The Hon'ble Membr has addressed a letter to K.S.R T.C to introduce a service on the said route. In view of the fact that the route is not nationalised, K.S R.T.C. does not contemplate to introduce any service on this route.

As already stated, R.T A., Chickmanglur has addressed private operators also to introduce a service on the aforesaid route to provide transport facilities from Devavrunda to Gowdahalli via Urubage, Sattiganahalli.

Transport Commissioner is also being requested to expedite the matter and ensure that travel facilities are provided to the aforesaid villages immediately.

ಶ್ರೀ ಜಿ. ಪುಟ್ಟಸ್ವಾಮಿ.—ಶ್ರೀ ಯಲ್ಲಪ್ಪ ಸೆಟ್ಟರು ಬಸ್ ಸರ್ವಿಸನ್ನು ನಡೆಸುವ ಸಂಬಂಧವಿರುವುದಿಲ್ಲ. ಅವರು ಆ ಸರ್ವಿಸನ್ನು ಮಾರಿದ್ದಾರೆಂದು ತಿಳಿದು ಬಂದಿದೆ. ಮೇಲಾಗಿ ಈಗ ಮೂಡಿಗೆರೆಯಲ್ಲಿ ಎರಡೂ

ಮೂರು ಕೆ.ಎಸ್.ಆರ್.ಟಿ.ಸಿ. ಬಸ್ಸುಗಳು ರಾತ್ರಿ ಹೊತ್ತು ನಿಲ್ಲುತ್ತವೆ, ಹಾಗೆ ತಂಗುವುದರಿಂದ ಒಂದು ಬಸ್ಸು ಬೆಳಿಗ್ಗೆ ೬ ಗಂಟೆಗೆ ಗೌಡನಹಳ್ಳಿ ಮಾರ್ಗವಾಗಿ ದೇವನಹಳ್ಳಿಗೆ ಹೋಗಿ ಬರಬಹುದು. ಇದರಿಂದ ಸ್ಕೂಲಿಗೆ ಬರುವ ಹುಡುಗರಿಗೆ ಹಾಗೂ ಇತರ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ. ಮೂಡಿಗೆರೆಯಲ್ಲಿ ನಿಲ್ಲುವ ಬಸ್ಸುಗಳಲ್ಲಿ ಒಂದು ಬಸ್ಸು ಕೊಟ್ಟಿಗೆಹಾಳವಲ್ಲಿ ನಿಲ್ಲುವಂತೆ ವ್ಯವಸ್ಥೆ ಮಾಡಿದರೆ ಅಲ್ಲಿಂದ ಬಸ್ಸು ಬೆಳಿಗೆ ಹೊರಡುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ಈ ಸೌಕರ್ಯವನ್ನು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಆ ಮಾರ್ಗವನ್ನು ರಾಷ್ಟ್ರೀಕರಣ ಮಾಡಿಲ್ಲ. ಆದರಿಂದ ಇತರರಂತೆ ನಾವೂ ಕೂಡ ಆರ್.ಟಿ.ಎ. ಗೆ ಅಪ್ಲಿಕೇಷನ್ ಹಾಕಿಕೊಳ್ಳಬೇಕಾಗುತ್ತದೆ. ಆ ಭಾಗ ನನಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ಸದಸ್ಯರು ಏನು ಅಭಿಪ್ರಾಯ ಪಡುತ್ತಾರೆ ಆ ವಿಚಾರವನ್ನು ನಾವು ಕೆ ಎಸ್.ಆರ್ ಟಿ.ಸಿ. ಯವರಿಂದ ಪರಿಶೀಲನೆ ಮಾಡಿಸಿ ಬಸ್ಸನ್ನು ಹಾಕುವುದಕ್ಕೆ ಅನುಕೂಲವಿದ್ದರೆ ಸಹಾಯ ಮಾಡುತ್ತೇನೆ.

NOTICE OF ADJOURNMENT MOTION

re:—Stoppage of buses in the city due to shrotage of Diesel Oil.

ಶ್ರೀ ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ನಿಲುವಳಿ ಸೂಚನೆ ಬಂದಿದೆ. ಅದು ನಿಲುವಳಿ ಸೂಚನೆಗೆ ಒಳಪಡತಕ್ಕ ವಿಷಯ ಆಗುವುದಿಲ್ಲ. ಆದರೂ ಮಂತ್ರಿಗಳಿಗೆ ಸ್ಟೇಟ್‌ಮೆಂಟ್ ಮಾಡಿ ಎಂದು ಹೇಳಿದ್ದೇನೆ. ಅವರು ಸ್ಟೇಟ್‌ಮೆಂಟ್ ಮಾಡಿದ ನಂತರ ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಬಹುದು.

†ಶ್ರೀ ಕೆ. ಎಚ್. ರಂಗನಾಥ್.—ಅಧ್ಯಕ್ಷರೇ, ಇದೇ ತಿಂಗಳು ಐದನೇ ತಾರೀಖಿನ ಪತ್ರಿಕೆಯಲ್ಲಿ ಡೀಸಲ್ ಆಯಿಲ್ ತೊಂದರೆ ಇರುವುದರಿಂದ ಬಸ್ಸುಗಳನ್ನು ನಿಲ್ಲಿಸಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡು ಜನತೆಗೆ ಮುನ್ಸೆಚ್ಚರಿಕೆ ಕೊಟ್ಟದ್ದು ನಿಜ. ಏಪ್ರಿಲ್ ೩೦ನೇ ತಾರೀಖು ಹಾಗೂ ಮೇ ಒಂದು ಮತ್ತು ಎರಡನೇ ತಾರೀಖು ಡೀಸೆಲ್ ಆಯಿಲ್ ತರತಕ್ಕ ವಿಶೇಷ ರೈಲುಗಳು ಬಾರದೆ ಇದುದ್ದರಿಂದ ಸರ್ಕಾರದವರು ಈ ತೀತಿಯ ತೀರ್ಮಾನವನ್ನು ತೆಗೆದುಕೊಳ್ಳಬೇಕಾಯಿತು. ಆದರೆ ಡೀಸೆಲ್ ಎಣ್ಣೆಯ ಪರಿಸ್ಥಿತಿ ಉತ್ತಮವಾಗಿದೆ ಎನ್ನುವ ವಿಚಾರವನ್ನು ಈ ದಿನದ ಪತ್ರಿಕೆಯಲ್ಲಿ ಮಾನ್ಯ ಸದಸ್ಯರು ಓದಿರಬಹುದು. ನಾವು ಈಗ ಯಾವ ಬಸ್ಸುಗಳನ್ನೂ ನಿಲ್ಲಿಸಬಾರದೆಂದು ತೀರ್ಮಾನ ಒಂದು ವಾರದ ವರೆಗೆ ಕೆ.ಎಸ್ ಆರ್.ಟಿ.ಸಿ. ಆದರ ಬಸ್ಸುಗಳನ್ನು ನಡೆಸುವುದಕ್ಕೆ ವ್ಯವಸ್ಥೆ ಮಾಡುವ ಪರಿಸ್ಥಿತಿಯಲ್ಲಿದೆ. ಆದುದರಿಂದ ಕಳವಳಕ್ಕೆ ಕಾರಣವಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಮತ್ತೆ ನಾವು ಕೂಡ ಹೆಚ್ಚು ಬಸ್ಸುಗಳನ್ನ ನಿಲ್ಲಿಸಿರಲಿಲ್ಲ. ಬಿ.ಟಿ.ಎಸ್. ವಿಭಾಗದಲ್ಲಿ ೩೪೨ ಬಸ್ಸುಗಳು ಓಡಾಡುತ್ತವೆ. ಅದರಲ್ಲಿ ೯೫ ಬಸ್ಸುಗಳು ಒಂದು ಗಂಟೆ ಮಾತ್ರ ನಿಂತಿದ್ದುವು. ನಿನ್ನೆ ೧೨ ಗಂಟೆಯಿಂದ ಮತ್ತೆ ರೆಗ್ಯುಲರ್ ಆಗಿ ಆಪರೇಟ್ ಆಗತಕ್ಕ ವ್ಯವಸ್ಥೆ ಮಾಡಲಾಗಿದೆ. ಮಾಫ್ಯೂಸಿಲ್ ಏರಿಯಾಸ್‌ಗೆ ಬೆಂಗಳೂರು ಬಸ್ಸು ನಿಲ್ದಾಣದಿಂದ ಸುಮಾರು ೩೮೦ ಬಸ್ಸುಗಳು ಹೊರಡುತ್ತವೆ. ಆದರಲ್ಲಿ ೨೫ ಬಸ್ಸುಗಳು ಮಾತ್ರ ಹೊರಡುವುದನ್ನು ನಿಲ್ಲಿಸಲಾಗಿತ್ತು. ಒಂದು ಗಂಟೆ ಸಮಾರಿಗೆ ಪರಿಸ್ಥಿತಿ ಉತ್ತಮವಾಗಿ ಈ ಹೊತ್ತು ಯಾವ ತಡೆಯೂ ಇಲ್ಲದೆ ನಾರ್ಮಲ್ ಆಗಿ ಎಲ್ಲ ಬಸ್ಸುಗಳೂ ಸಂಚಾರ ಮಾಡುವ ವ್ಯವಸ್ಥೆಯಾಗಿದೆ. ಇಷ್ಟು ವಿಚಾರವನ್ನು ಸಭೆಯ ಗಮನಕ್ಕೆ ತರಲು ಇಷ್ಟ ಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಪತ್ರಿಕೆಯಲ್ಲಿ ನಾವು ಓದಿದ ಪ್ರಕಾರ ಸುಮಾರು ೫೦ ಪರ್ಸೆಂಟ್ ಬಸ್ಸುಗಳು ನಿಲ್ಲುತ್ತವೆ ಎನ್ನುವ ಅಭಿಪ್ರಾಯ ಬಂದಿದೆ. ಡೀಸೆಲ್ ಆಯಿಲ್ ತೊಂದರೆಯಾಗುವಾಗ ಬಸ್ಸುಗಳು ನಿಲ್ಲಬೇಕಾಗುತ್ತದೆ. ಈಗ ಡೀಸೆಲ್ ಬಂದಿದೆ ಅನ್ನುವ ಅಂಶ ಗೊತ್ತಾಗಿದೆ. ಇನ್ನೊಂದು ವಾರದವರೆಗೂ ಏನೂ ತೊಂದರೆ ಇಲ್ಲ ಎನ್ನುವ ಮಾತನ್ನು ಸಚಿವರು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಮತ್ತೆ ರೈಲ್ವೆ ಮಿನಿಸ್ಟರ್ ಮುಂದಾವರಿದರೆ, ಅದು ಅವರ ಕೈಯಲ್ಲಿಲ್ಲ ಎನ್ನುವ ಮಾತನ್ನೂ ಒಪ್ಪಬೇಕಾಗುತ್ತದೆ.